**ಓ ಎಸ್ ನಂಃ 799/2014**

**ಡಿ. ಡಬ್ಲ್ಯೂ ಃ 1**

**ದಿಃ 11.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್.ಜಿ.ಯು ವಕೀಲರಿಂದ**

10. ವಾದಿ ನನ್ನ ಊರಿನವರು ಎಂದರೆ ಸರಿ. ಅವರ ತಂದೆಯ ಹೆಸರು ರೇವಣ್ಣ ಎಂದರೆ ಸರಿ. ಅವರು ದಾವಾ ಸ್ವತ್ತಿಗೆ ಮಾಲೀಕರು ಮಾಡಿ ಎಂದು ಈ ದಾವೆ ಸಲ್ಲಿಸಿದ್ದಾರೆ. ದಾವಾ ಸರ್ವೇ ನಂಬರ್ 46/2 ರಲ್ಲಿ 6 ಎಕರೆ 36 ಗುಂಟೆ ಅಜ್ಜನಹಳ್ಳಿಗೆ ಸೇರಿದ ಸ್ವತ್ತು ಎಂದರೆ ಸರಿ. ಅವರು ಸಲ್ಲಿಸಿರುವ ವಾದ ಪತ್ರ ಓದಿದ್ದೇನೆ. ಅವರು ಹಾಜರುಪಡಿಸಿದ ದಾಖಲೆಗಳ ಬಗ್ಗೆ ಕೂಡ ತಿಳಿದುಕೊಂಡಿದ್ದೇನೆ. ವಾದಿ ದಾವಾ ಸರ್ವೇ ನಂಬರ್ 46 ಮೂಲತಃ ರಾಮಕ್ಕನಿಗೆ ಸೇರಿದ ಸ್ವತ್ತು ಎಂದು ಹೇಳಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು ಹಾಜರುಪಡಿಸಿದ ಕ್ರಯಪತ್ರವನ್ನು ನಾನು ನೋಡಿಲ್ಲ. ಆ ಸ್ವತ್ತಿಗೆ ಸಂಬಂಧಪಟ್ಟಂತಹ ಆ ಕ್ರಯಪತ್ರವನ್ನು ತಿಳಿದುಕೊಳ್ಳಲು ನಾನು ಪ್ರಯತ್ನಪಟ್ಟಿಲ್ಲ ಎಂದರೆ ಸರಿ. ನಾನು ನನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಸ್ವತ್ತು ರಾಮಕ್ಕರಿಗೆ ಸೇರಿತ್ತಾ ಇಲ್ಲವಾ ಎಂದು ಹೇಳಿಲ್ಲ. ವಾದಿ ಸರ್ವೇ ನಂಬರ್ 46 ರಲ್ಲಿ15 ಎಕರೆ 38 ಗುಂಟೆ ಹಾಗೂ ಸರ್ವೇ ನಂಬರ್ 47 ರಲ್ಲಿ 6 ಎಕರೆ 13 ಗುಂಟೆ ಇದೆ ಎಂದು ವಾದ ಪತ್ರದಲ್ಲಿ ಹೇಳಿರುವುದು ನನಗೆ ಗೊತ್ತಿದೆ. ಅದಕ್ಕೆ ಸಂಬಂಧಪಟ್ಟಂತಹ ದಾಖಲೆ ಪರಿಶೀಲನೆ ಮಾಡಿಲ್ಲ.

11. ರಾಮಕ್ಕ ನವರು ದಿನಾಂಕ ಃ 10.04.1997 ರಲ್ಲಿ ರೇವಣ್ಣ ನವರಿಗೆ ಸರ್ವೇ ನಂಬರ್ 46/2 ರಲ್ಲಿ 6 ಎಕರೆ 36 ವರೆ ಗುಂಟೆ ಹಾಗೂ ಸರ್ವೇ ನಂಬರ್ 47 ರಲ್ಲಿ 2 ಎಕರೆ 13 ಗುಂಟೆ ಮಾರಾಟ ಮಾಡಿದ್ದಾರೆ ಎಂದು ಹೇಳಿರುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ನಿ ಪಿ 17 ಸದರಿ ಕ್ರಯಪತ್ರ ಎಂದರೆ ಸರಿ. ಸದರಿ ರೇವಣ್ಣನ ಮಗನೆ ವಾದಿ ಎಂದರೆ ಸರಿ. ನಾನು ಕೊಂಡುಕೊಂಡಿರುವ ಜಮೀನು ರಾಮಕ್ಕ ನವರು ಕೆಂಪಯ್ಯ ನವರಿಗೆ ಮಾರಾಟ ಮಾಡಿದ ಸ್ವತ್ತಿನ ಅರ್ಧಭಾಗದ ಪೈಕಿ ಜಮೀನು ಎಂದರೆ ನನಗೆ ಗೊತ್ತಿಲ್ಲ.

12. ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ಪ್ರತಿವಾದ ಪತ್ರದ ಎಲ್ಲಾ ವಿಚಾರಗಳು ಇಲ್ಲ ಎಂದರೆ ಸರಿಯಲ್ಲ. 3 ಎಕರೆ 20 ಗುಂಟೆ ಜಮೀನನ್ನು ಮರಿಹೊನ್ನಯ್ಯ ರವರಿಂದ ನನ್ನ ತಂದೆ

ಖರೀದಿಸಿರುತ್ತಾರೆ. ಸದರಿ ಮರಿಹೊನ್ನಯ್ಯ ಪ್ರತಿವಾದಿ 1 ರವರ ಗಂಡ ಹಾಗೂ 2 ರವರ ತಂದೆ ಎಂದರೆ ಸರಿ. ಸದರಿ ಮರಿಹೊನ್ನಯ್ಯ ರವರಿಗೆ ಯಾವ ರೀತಿ ಜಮೀನು ಬಂತು ಎಂದು ನನಗೆ ಗೊತ್ತಿಲ್ಲ. ನಿ ಡಿ 2 ಮತ್ತು 3 ರಲ್ಲಿ ಸದರಿ ಮರಿಹೊನ್ನಯ್ಯ ರವರಿಗೆ ಹೇಗೆ ಆ ಮಾರಾಟ ಮಾಡಿದ ಜಮೀನುಗಳು ಬಂತು ಎಂದು ಹೇಳಿಲ್ಲ ಎಂದರೆ ಸರಿ. ಆನಂತರ ಕೂಡ ಅವರಿಗೆ ಆ ಸ್ವತ್ತುಗಳು ಯಾವ ರೀತಿ ಬಂತು ಎಂದು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಈಗಲೂ ಪಹಣಿ ಬರುತ್ತಿದೆ ಎಂದರೆ ಸರಿ. ನನ್ನ ತಂದೆ ಮೃತಪಟ್ಟಿದ್ದಾರೆ. ನನ್ನ ತಂದೆಯ ಮೃತ ಪಟ್ಟ ನಂತರ ಆ ಜಮೀನನ್ನು ಭಾಗ ಮಾಡಿಕೊಳ್ಳಲು ಅಥವಾ ಖಾತೆ ಮಾಡಿಕೊಳ್ಳಲು ಪ್ರಯತ್ನಪಟ್ಟಿಲ್ಲ. ನನ್ನ ತಂದೆ ಕ್ರಯಪತ್ರ ಆದ ಮೇಲೆ ಹಾಗೂ ಅವರು ಮೃತಪಟ್ಟ ನಂತರ ಕೂಡ ಆ ಕ್ರಯಪತ್ರದಲ್ಲಿ ಹೇಳಿರುವ ಜಮೀನುಗಳ ಸ್ವಾಧೀನದಲ್ಲಿ ನಾವು ಇಲ್ಲ ಎಂದರೆ ಸರಿಯಲ್ಲ. ಆ ರೀತಿ ಸ್ವಾಧೀನದಲ್ಲಿ ಇಲ್ಲದೆ ಇದ್ದುದ್ದರಿಂದ ಅವರ ಮೃತಪಟ್ಟ ನಂತರ ಕೂಡ ನಾವು ಖಾತೆ ಮಾಡಿಕೊಳ್ಳಲು ಪ್ರಯತ್ನಪಟ್ಟಿಲ್ಲ ಎಂದರೆ ಸರಿಯಲ್ಲ.

13. ನಿ ಡಿ 2 ರಲ್ಲಿ ಹೇಳಿರುವ ಜಮೀನಿನ ದಕ್ಷಿಣ ಹಾಗೂ ಪಶ್ಚಿಮಕ್ಕೆ ಲಕ್ಷ್ಮಮ್ಮ ಹಾಗೂ ಚಿಕ್ಕಹೊನ್ನಯ್ಯ ರವರ ಜಮೀನು. ಆ ಕ್ರಯಪತ್ರದಲ್ಲಿ ಲಕ್ಷ್ಮಮ್ಮ ಇದ್ದಾರೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ ಮರಿಹೊನ್ನಯ್ಯ ರವರ ಜಮೀನು ಇರುತ್ತದೆ. ಆ ಕ್ರಯಪತ್ರದಲ್ಲಿ ದಾಸುತ್ತಯ್ಯ ರವರ ಜಮೀನು ಇದೆ ಎಂದರೆ ಸಾಕ್ಷಿ ನಾವು ಕ್ರಯಕ್ಕೆ ಕೊಂಡಾಗ ಅವರದೇ ಜಮೀನು ಇತ್ತು ಎಂದು ನುಡಿಯುತ್ತಾರೆ. ಉತ್ತರಕ್ಕೆ ಬೈಲಮ್ಮ ಹಾಗೂ ವೆಂಕಟರಮಣಯ್ಯ ರವರ ಜಮೀನು ಇದೆ.

14. ನಿ ಡಿ 3 ರಲ್ಲಿ ಪೂರ್ವಕ್ಕೆ ದಾಸುತ್ತಯ್ಯ, ಪಶ್ಚಿಮಕ್ಕೆ ಲಕ್ಷ್ಮಮ್ಮ, ಉತ್ತರಕ್ಕೆ ಲಕ್ಷ್ಮಣಪ್ಪ ಹಾಗೂ ಮುನಿಸ್ವಾಮಯ್ಯ ಹಾಗೂ ದಕ್ಷಿಣಕ್ಕೆ ಲಕ್ಷ್ಮಮ್ಮ ಎಂಬುದಾಗಿ ಇದೆ. ಆ ಕ್ರಯಪತ್ರದಲ್ಲಿ ತೋರಿಸಿರುವ ಚೆಕ್ ಬಂದಿ ಪ್ರಕಾರ ನಾವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಅದೇ ಸರ್ವೇ ನಂಬರ್ ನಲ್ಲಿ ಕೆಂಪಯ್ಯ ಕೊಂಡುಕೊಂಡ ಜಮೀನು ಎಂದರೆ ನನಗೆ ಗೊತ್ತಿಲ್ಲ. ಪಶ್ಚಿಮಕ್ಕೆ ಕೆಂಪರಾಮಯ್ಯ ಹಾಗೂ ಪಟೇಲ್ ತಿಮ್ಮೇಗೌಡರ ಜಮೀನು ಹಾಗೂ ಉತ್ತರಕ್ಕೆ ಗೂಳಿಬೈರಣ್ಣ ರವರ ಜಮೀನು ಎಂದರೆ ಸರಿ. ದಕ್ಷಿಣಕ್ಕೆ ಶ್ಯಾನುಬೋಗ ರಾಮಚಂದ್ರಯ್ಯ ರವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ವಾದಿ 6 ಎಕರೆ

36 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

**15.** ಕೆಂಪಣ್ಣ ರವರು ರಾಮಕ್ಕ ರಿಂದ ಸರ್ವೇ ನಂಬರ್ 46/2 ಮತ್ತು 47 ರಲ್ಲಿ ಅರ್ಧಭಾಗವನ್ನು ಕೊಂಡುಕೊಂಡಿದ್ದಾರೆ ಎಂದರೆ ಸಾಕ್ಷಿ ಕೊಂಡಿರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕೆಂಪಣ್ಣ ನವರಿಗೆ ಮರಿಹೊನ್ನಯ್ಯ ಹಾಗೂ ಚಿಕ್ಕಹೊನ್ನಯ್ಯ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ಸಾಕ್ಷಿ ಪುನಃ ದೊಡ್ಡಹೊನ್ನಯ್ಯ ಹಾಗೂ ಚಿಕ್ಕಹೊನ್ನಯ್ಯ ಎಂಬ ಮಕ್ಕಳು ಎಂದು ನುಡಿಯುತ್ತಾರೆ. ದೊಡ್ಡಹೊನ್ನಯ್ಯ ರವರ ಮಗ ಮರಿಹೊನ್ನಯ್ಯ ಎಂದರೆ ಸರಿ. ಪ್ರತಿವಾದಿ 3 ರಿಂದ 8 ರವರು ಸದರಿ ಚಿಕ್ಕಹೊನ್ನಯ್ಯ ರವರ ವಾರಸುದಾರರು ಎಂದರೆ ಸರಿ. ಸದರಿ ದೊಡ್ಡಹೊನ್ನಯ್ಯ ಹಾಗೂ ಚಿಕ್ಕಹೊನ್ನಯ್ಯ ಕೆಂಪಣ್ಣ ಖರೀದಿಸಿದ ಜಮೀನನ್ನು ಭಾಗ ಮಾಡಿಕೊಂಡಿದ್ದಾರೆ. ಅವರಿಬ್ಬರು ಸರ್ವೇ ನಂಬರ್ 46/2 ರಲ್ಲಿ 6 ಎಕರೆ 36 ಗುಂಟೆಗೆ 0ಮಾತ್ರ ಹಕ್ಕುದಾರರು ಎಂದರೆ ನನಗೆ ಗೊತ್ತಿಲ್ಲ. ದೊಡ್ಡಹೊನ್ನಯ್ಯ ರವರ ಭಾಗದ ಸ್ವತ್ತನ್ನು ಮರಿಹೊನ್ನಯ್ಯ ರವರು ನಮಗೆ ಮಾರಾಟ ಮಾಡಿದ್ದರೂ ನಾ0ವು ಅದರ ಸ್ವಾಧೀನದಲಿಲ್ಲ ಎಂದರೆ ಸಾಕ್ಷಿ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಮರಿಹೊನ್ನಯ್ಯ ಹಾಗೂ ಚಿಕ್ಕಹೊನ್ನಯ್ಯ ಸರ್ವೇ ನಂಬರ್ 46/2 ರಲ್ಲಿ 4 ಎಕರೆ 11 ವರೆ ಗುಂಟೆಯನ್ನು 2 ಭಾಗಗಳನ್ನಾಗಿ ಮಾಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸರ್ವೇ ನಂಬರ್ 46/2 ರಲ್ಲಿ 6 ಎಕರೆ 36 ಗುಂಟೆ ಅವರಿಗೆ ಇದ್ದುದ್ದರಿಂದ ಮರಿಹೊನ್ನಯ್ಯ ರವರಿಗೆ ಅದರಲ್ಲಿ ಅರ್ಧಭಾಗದ ಮಾತ್ರ ಹಕ್ಕು ಎಂದರೆ ಸರಿ. ಉಳಿದ ಅರ್ಧಭಾಗ ಚಿಕ್ಕಹೊನ್ನಯ್ಯ ನ ಭಾಗದ ಸ್ವತ್ತು ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**